ಆ) ಆ ಸಂದರ್ಭಗಳಲ್ಲಿ ಭದ್ರತಾ ವ್ಯವಸ್ಥೆಗಳಿಗೆ ಹಾಗೂ ಇತರೆ ವ್ಯವಸ್ಥೆಗಳಿಗೆ ಖರ್ಚಾದ ಹಣವೆಷ್ಟು ?

ಶ್ರೀ ವೀರೇಂದ್ರಪಾಟೀಲ್ (ಮುಖ್ಯ ಮಂತ್ರಿಗಳು).—

ಅ) ರಾಷ್ಟ್ರದ ಮಾಜಿ ಪ್ರಧಾನಿ ಶ್ರೀ ರಾಜೀವ್ ಗಾಂಧಿಯವರು ಈ ಅವಧಿಯಲ್ಲಿ ಒಟ್ಟು ಒಂಭತ್ತು ಭಾರಿ ಕರ್ನಾಟಕಕ್ಕೆ ಭೇಟಿ ನೀಡಿರುತ್ತಾರೆ.

ಆ) ಈಗಿನ ಪ್ರಧಾನಿಯವರು ಅವರ ಪ್ರಧಾನ ಮಂತ್ರಿಗಳಾಗಿ ಅಧಿಕಾರ ವಹಿಸಿಕೊಂಡಂದಿನಿಂದ ಇದುವರೆಗೆ ಒಂದು ಭಾರಿಯೂ ಕರ್ನಾಟಕಕ್ಕೆ ಭೇಟಿ ನೀಡಿರುವುದಿಲ್ಲ.

ರೂ. ೯೪, ೮೨, ೩೪೭–೩೩

೧೯೮೯ರ ಮಾರ್ಚ್ ನಿಂದ ಈಚೆಗೆ ಆಗಿರತಕ್ಕ ಸರ್ಕಾರಿ ಉನ್ನತಾಧಿಕಾರಿಗಳ ವರ್ಗಾವಣೆ

೧೨೫. ಶ್ರೀ ಪಿ. ಜಿ. ಆರ್. ಸಿಂಧ್ಯ (ಕನಕಪುರ).— ಮಾನ್ಯ ಮುಖ್ಯ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ೧೯೮೯ನೇ ಮಾರ್ಚ್ ನಿಂದ ೧೯೯೦ರ ಫೆಬ್ರವರಿ ಕೊನೆಯವರೆಗೆ ಎಷ್ಟು ಸಾರಿ ರಾಜ್ಯದಲ್ಲಿ ಐ.ಎ.ಎಸ್.. ಐ.ಪಿ.ಎಸ್., ಐ.ಎಫ್.ಎಸ್. ಹಾಗೂ ಕೆ.ಎ.ಎಸ್. ಅಧಿಕಾರಿಗಳ ವರ್ಗಾವಣೆ ಮಾಡಲಾಗಿದೆ ಹಾಗೂ ಅವರ ಸಂಖ್ಯೆ ಎಷ್ಟು ?

ಆ) ಈ ವರ್ಗಾವಣೆಗಳನ್ನು ಮಾಡುವಾಗ ಸರ್ಕಾರವು ಅನುಸರಿಸಿದ ನಿಯಮಗಳೇನು ?

ಶ್ರೀ ವೀರೇಂದ್ರಪಾಟೀಲ್ (ಮುಖ್ಯ ಮಂತ್ರಿಗಳು).—

ಅ)

	ವರ್ಗಾವಣೆಗಳ ಸಂಖ್ಯೆ	ವರ್ಗಾವಣೆಗಳಾದ ಅಧಿಕಾರಿಗಳ ಸಂಖ್ಯೆ
ಐ.ಎ.ಎಸ್.	೪೧	೧೪೪
ಐ.ಪಿ.ಎಸ್.	೧೭	೬೭
ಐ.ಎಫ್.ಎಸ್.	೧೪	೪೫
ಕೆ.ಎ.ಎಸ್.	೬೧	೧೯೬

ಆ) ಸಾರ್ವಜನಿಕ ಹಿತದೃಷ್ಟಿಯಿಂದ ಹಾಗೂ ಆಡಳಿತಾತ್ಮಕ ಕಾರಣಗಳಿಗೋಸ್ಕರ.

ನಗರದಲ್ಲಿ ಮುಂಜರಾಯಿ ಇಲಾಖೆಗೆ ಸೇರಿರುವ ದೇವಸ್ಥಾನಗಳು

೧೨೮. ಶ್ರೀಮತಿ ಸುಮಾ ವಸಂತ್ (ವೀರಾಜಪೇಟೆ).— ಮಾನ್ಯ ಕಂದಾಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಂಗಳೂರು ನಗರದಲ್ಲಿರುವ ಮುಜರಾಯಿ ಇಲಾಖೆಗೆ ಸೇರಿದ ದೇವಸ್ಥಾನಗಳ ಸಂಖ್ಯೆ ಎಷ್ಟು ? (ದೇವಸ್ಥಾನಗಳ ಹೆಸರು ಹಾಗೂ ವಿಳಾಸಗಳನ್ನು ಒದಗಿಸುವುದು)

ಆ) ೧೯೮೮–೮೯ನೇ ಮತ್ತು ೧೯೮೯–೯೦ರ ಫೆಬ್ರವರಿ ಕೊನೆಯವರೆಗೆ ಈ ದೇವಸ್ಥಾನಗಳಿಂದ ಸರ್ಕಾರಕ್ಕೆ ಬಂದಿರುವ ಆದಾಯ ಎಷ್ಟು ?

ಶ್ರೀ ಅಜೀಜ್ ಸೇಠ್ (ಕಂದಾಯ ಮಂತ್ರಿಗಳು).—

ಅ) ೫೩
(ಹೆಸರು ಹಾಗೂ ವಿಳಾಸದ ಪಟ್ಟಿ ಲಗತ್ತಿಸಿದೆ).

ಆ) ಸರ್ಕಾರಕ್ಕೆ ಈ ದೇವಸ್ಥಾನದಿಂದ ಯಾವ ಆದಾಯವೂ ಬರುವುದಿಲ್ಲ.